# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

## Bangalore Electricity Supply Company Limited

ಮುಖ್ಯ ಪ್ರಧಾನ ವ್ಯವಸ್ಥಾಪಕರು
(ನಿಗಮ ವ್ಯವಹಾರ) ರವರ ಕಛೇರಿ
ಕಂಪನಿ ಕಾರ್ಯಾಲಯ, ಬೆ.ವಿ.ಕಂ.
ಕೆ.ಆರ್.ವೃತ್ತ, ಬೆಂಗಳೂರು.

### <u>ಸುತ್ತೋಲೆ</u>

**ವಿಷಯ:** ಮಾಹಿತಿ ಹಕ್ಕು ಅಧನಿಯಮ 2005ರ ಸೆಕ್ಷನ್ 4(1)(ಎ) ಮತ್ತು 4(1)(ಬಿ) ಅಡಿ ಸ್ವಯಂಪ್ರೇರಣೆಯಿಂದ ಮಾಹಿತಿಯನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ:** 1. ದಿನಾಂಕ: 30.01.2013 ರ ಓ.ಆರ್.ಎಮ್ ಸಭೆಯ ನಡಾವಳಿ.

2. ಕರ್ನಾಟಕ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶ ಸಂಖ್ಯೆ ಸಿಆಸುಇ 140 ಆರ್.ಟಿ.ಐ 2012 ದಿನಾಂಕ:19.11.2012.

3. ಕಛೇರಿ ಸುತ್ತೋಲೆ ಸಂಖ್ಯೆ: ಬೆ.ವಿ.ಕಂ/ಮು.ಪ್ರ.ವ್ಯ(ನಿ.ವ್ಯ)/ಬಿ.ಸಿ-9/ಆರ್.ಟಿ.ಐ/ಕ-1/2012-13/ಸಿ.ವೈ.ಎಸ್-4506 ದಿ:10.01.2013.

4. ಸುತ್ತೋಲೆ ಸಂಖ್ಯೆ: ಬೆವಿಕಂ: ಬಿಸಿ-46: 3301: 2011-12/ಸಿವೈಎಸ್-5288 ದಿ: 23.01.2013

### <u>ಪ್ರಸ್ತಾವನೆ</u>

ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 4(1)(ಎ) ಪ್ರಕಾರ ಪ್ರತಿ ಕಛೇರಿಗಳಲ್ಲಿ ನಿರ್ವಹಿಸಲ್ಪಡುವ ಕಡತಗಳ ವಿವರವನ್ನು (cataloguing, indexing) ವಿಷಯಸೂಚಿಯೊಂದಿಗೆ ಗಣಕೀಕರಣಗೊಳಿಸಿ ಮಾಹಿತಿ ಬಯಸುವವರಿಗೆ ಕೂಡಲೆ ಲಭ್ಯವಾಗಿಸುವುದು ಮತ್ತು ಸೆಕ್ಷನ್ 4(1)(ಬಿ) ಅಡಿ ಎಲ್ಲಾ ಕಛೇರಿಗಳ ಹಾಗು ಅಲ್ಲಿನ ಹುದ್ದೆಗಳ ವಿವರ ಕುರಿತು 17 ಅಂಶಗಳನ್ನೊಳಗೊಂಡ ಪರಿಪೂರ್ಣಗೊಳಿಸಿದ ಮಾಹಿತಿಯನ್ನು ಸ್ವಯಂಪ್ರೇರಣೆಯಿಂದ ಆಯಾ ಸಾರ್ವಜನಿಕ ಪ್ರಾಧಿಕಾರಿಗಳು ಪ್ರತಿ ವರ್ಷ ಪರಿಷ್ಕರಿಸಿ ವಿವಿಧ ಸಂಪರ್ಕಗಳ ಮೂಲಕ ದೊರಕಿಸುವುದು ಕಡ್ಡಾಯವಾಗಿರುತ್ತದೆ. ಅದರಂತೆ ಬೆ.ವಿ.ಕಂ. ನ ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಸದರಿ ಮಾಹಿತಿಗಳನ್ನು ಸಿದ್ಧಪಡಿಸಿ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸುವುದರ ಜೊತೆಗೆ ಮಾಹಿತಿಗಳನ್ನು ಕಾಲಕಾಲಕ್ಕೆ ಪರಿಪೂರ್ಣಗೊಳಿಸಬೇಕಾಗಿರುತ್ತದೆ. ಇದರಿಂದ ಬೆ.ವಿ.ಕಂ. ನ ವಿವಿಧ ಕಛೇರಿಗಳಲ್ಲಿ ಒಂದೇ ಮಾಹಿತಿಯ ಬಗ್ಗೆ ಹಲವಾರು ಅರ್ಜಿಗಳು ಸ್ವೀಕೃತವಾಗುವುದನ್ನು ತಡೆಯಬಹುದಾಗಿರುತ್ತದಲ್ಲದೆ ತತ್ಸಂಬಂಧ ಕ್ರಮ ವಹಿಸಲು ಬಳಸುವ ಮಾನವ ಸಂಪನ್ಮೂಲವನ್ನು ಇತರ ಫಲದಾಯಕ ಕಾರ್ಯಗಳಲ್ಲಿ ತೊಡಗಿಸಬಹುದಾಗಿರುತ್ತದೆ ಹಾಗೂ ಆಡಳಿತದಲ್ಲಿ ಪಾರದರ್ಶಕತೆಯನ್ನು ಅನುಷ್ಠಾನಗೊಳಿಸಿದಂತಾಗುತ್ತದೆ.

ಸಾರ್ವಜನಿಕ ಪ್ರಾಧಿಕಾರಗಳು ಮಾಹಿತಿ ಹಕ್ಕು ಅಧಿನಿಯಮ, 2005 ಜಾರಿಗೆ ಬಂದು ಏಳು ವರ್ಷಗಳಾದರೂ, ಸ್ವಯಂಪ್ರೇರಣೆಯಿಂದ ಕಡ್ಡಾಯವಾಗಿ ಪ್ರಕಟಿಸಬೇಕಾದ ಮಾಹಿತಿಗಳನ್ನು ಕಾಯ್ದೆಯ ಸೆಕ್ಷನ್ 4(1)(ಎ) ಮತ್ತು 4(1)(ಬಿ) ಅಡಿಯಲ್ಲಿ ಸಿದ್ಧಪಡಿಸಿ ಪ್ರಕಟಿಸಿಲ್ಲದಿರುವುದನ್ನು ಕರ್ನಾಟಕ ರಾಜ್ಯ ಮಾಹಿತಿ ಆಯೋಗವು ಹಲವು ಪ್ರಕರಣಗಳಲ್ಲಿ ಗಮನಿಸಿದೆ.

ಈ ಕುರಿತು ದಿ: 13.02.2013 ರ ಓ.ಆರ್.ಎಮ್. ಸಭೆಯ ಉಲ್ಲೇಖ (1)ರ ನಡಾವಳಿಯಲ್ಲಿ ಮೇಲಿನ ಮಾಹಿತಿಗಳನ್ನು ಅಂತರ್ಜಾಲದಲ್ಲಿ ಪ್ರಕಟಿಸಲು ಬೆ.ವಿ.ಕಂ ನ ಎಲ್ಲಾ ವಿಭಾಗಗಳ ಕಾರ್ಯನಿರ್ವಾಹಕ ಇಂಜಿನಿಯರ್ ಹಾಗೂ ಎಲ್ಲಾ ವೃತ್ತಗಳ ಅಧೀಕ್ಷಕ ಇಂಜಿನಿಯರ್‌ಗಳು ಕೂಡಲೆ ಕಾರ್ಯಪರರಾಗಲು ಸೂಚಿಸಿದೆ. ಅದರಂತೆ ಮಾಹಿತಿಯನ್ನು ಬೆ.ವಿ.ಕಂ ನ ಅಂತರ್ಜಾಲದಲ್ಲಿ ಪ್ರಕಟಿಸಲು ಅನುಕೂಲವಾಗುವಂತೆ ಬಳಕೆದಾರರ ಕೈಪಿಡಿಯನ್ನು ಪ್ರಧಾನ ವ್ಯವಸ್ಥಾಪಕರು (ICT&MIS)ರವರು ಹೊರಡಿಸಿದ್ದು, ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಕಟಣಾ ಕಾರ್ಯ ಕೈಗೊಳ್ಳುವಂತೆ ಸೂಚಿಸಲು ಈ ಸುತ್ತೋಲೆಯನ್ನು ಹೊರಡಿಸಲಾಗಿದೆ.

ಸುತ್ತೋಲೆ ಸಂಖ್ಯೆ: ಬೆ.ವಿ.ಕಂ/ಬಿಸಿ-9/ಮು.ಪ್ರವ್ಯ(ನಿ.ವ್ಯ)/ಉ.ಪ್ರವ್ಯ(ಮಾ.ಹ)/2012-13/ಸಿವೈಎಸ್- 6383

ದಿನಾಂಕ- 20.02.13

ಉಲ್ಲೇಖ (2)ರ ಅನ್ವಯ ಬೆ.ವಿ.ಕಂ ನ ಎಲ್ಲಾ ಕಛೇರಿಗಳಲ್ಲಿ ಆಯಾ ಕಛೇರಿಗೆ ಸಂಬಂಧಿಸಿದಂತೆ ಕೆಳಗೆ ನೀಡಿರುವ ಸೆಕ್ಷನ್ 4(1)(ಎ) ನಮೂನೆಯಲ್ಲಿನ ಮಾಹಿತಿಯನ್ನು ಹಾಗೂ ಸೆಕ್ಷನ್ 4(1)(ಬಿ) ಅಡಿ 17 ಅಂಶಗಳ ಕುರಿತು ಪರಿಪೂರ್ಣಗೊಳಿಸಿದ(update) ಮಾಹಿತಿಯನ್ನು ಆಯಾ ಪ್ರಾಧಿಕಾರದ ಸಾರ್ವಜನಿಕ ಮಾಹಿತಿ ಅಧಿಕಾರಿಯು ಬೆ.ವಿ.ಕಂ.ನ ಅಂತರ್ಜಾಲದಲ್ಲಿ ಪ್ರಕಟಿಸಲು ಕ್ರಮ ಕೈಗೋಳ್ಳುವಂತೆ ಈಗಾಗಲೇ ಉಲ್ಲೇಖ (3)ರ ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

**4(1)(ಎ) ನಮೂನೆ**

| ಕ್ರಮ ಸಂಖ್ಯೆ | ಕಡತ ಸಂಖ್ಯೆ | ವಿಷಯ | ಕಡತದಲ್ಲಿರುವ ಪುಟಗಳ ಸಂಖ್ಯೆ | ಕಡತ ಪ್ರಾರಂಭಿಸಿದ ದಿನಾಂಕ | ಕಡತ ಮುಕ್ತಾಯಗೊಳಿಸಿದ ದಿನಾಂಕ | ಕಡತ ವರ್ಗೀಕರಣ | ಕಡತ ನಾಶಗೊಳಿಸಿದ ದಿನಾಂಕ | ಷರಾ |
|---|---|---|---|---|---|---|---|---|
| | | | | | | | | |
| | | | | | | | | |

ಮಾಹಿತಿ ಹಕ್ಕು ಅಧಿನಿಯಮವು ಆಯೋಗದ scic@karnataka.gov.in ಅಂತರ್ಜಾಲದಲ್ಲಿ ಲಭ್ಯವಿರುತ್ತದೆ. ಅದರಲ್ಲಿ ಸೂಚಿಸಿರುವಂತೆ ಬೆ.ವಿ.ಕಂ ಕುರಿತ ಮಾಹಿತಿಯನ್ನು ಅಂತರ್ಜಾಲದಲ್ಲಿ ಪ್ರಕಟಿಸಲು(update) ಅನುಸರಿಸಬೇಕಾದ ಕ್ರಮ ಕುರಿತ ಪ್ರಧಾನ ವ್ಯವಸ್ಥಾಪಕರು (ICT&MIS)ರವರು ಈಗಾಗಲೆ ಬಳಕೆದಾರರ ಕೈಪಿಡಿಯನ್ನು ನೀಡಿದ್ದು, ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ ಹಾಗೂ ಈ ಕುರಿತು ಉಲ್ಲೇಖ (4)ರ ಸುತ್ತೋಲೆಯನ್ನೂ ಹೊರಡಿಸಲಾಗಿದೆ. ಅದರಂತೆ ಬೆ.ವಿ.ಕಂ.ನ ಎಲ್ಲಾ ವಲಯ, ವೃತ್ತ, ವಿಭಾಗ, ಮತ್ತು ಉಪ ವಿಭಾಗದ ಸಾರ್ವಜನಿಕ ಮಾಹಿತಿ ಅಧಿಕಾರಿಗಳು 4(1)(ಎ) ಮತ್ತು 4(1)(ಬಿ) ಕುರಿತ ಮಾಹಿತಿಯನ್ನು ಅಂತರ್ಜಾಲದಲ್ಲಿ ಪ್ರಕಟಿಸಲು ಕೂಡಲೆ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿದೆ.

19/2/13

ಮುಖ್ಯ ಪ್ರಧಾನ ವ್ಯವಸ್ಥಾಪಕರು

(ನಿಗಮ ವ್ಯವಹಾರ)

ಪ್ರತಿಗಳು:

1. ಎಲ್ಲಾ ಮುಖ್ಯ ಪ್ರಧಾನ ವ್ಯವಸ್ಥಾಪಕರು, ನಿಗಮ ಕಾರ್ಯಾಲಯ, ಬೆ.ವಿ.ಕಂ. ಬೆಂಗಳೂರು.
2. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕಾ ಮತ್ತು ಪಾ ವಲಯ, ಬೆ.ವಿ.ಕಂ.
3. ಎಲ್ಲಾ ಪ್ರಧಾನ ವ್ಯವಸ್ಥಾಪಕರು, ನಿಗಮ ಕಾರ್ಯಾಲಯ, ಬೆ.ವಿ.ಕಂ. ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಬೆ.ವಿ.ಕಂ.
5. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಬೆ.ವಿ.ಕಂ.
6. ಪೊಲೀಸ್ ಅಧೀಕ್ಷಕರು, ಜಾಗೃತ ದಳ, ಬೆ.ವಿ.ಕಂ.
7. ಎಲ್ಲಾ ಉಪ ಪ್ರಧಾನ ವ್ಯವಸ್ಥಾಪಕರು, ನಿಗಮ ಕಾರ್ಯಾಲಯ, ಬೆ.ವಿ.ಕಂ, ಬೆಂಗಳೂರು.
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಬೆ.ವಿ.ಕಂ.
9. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪ ವಿಭಾಗ, ಬೆ.ವಿ.ಕಂ.
10. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂ) ರವರ ಆಪ್ತ ಕಾರ್ಯದರ್ಶಿಗಳು, ನಿಗಮ ಕಾರ್ಯಾಲಯ, ಬೆ.ವಿ.ಕಂ. ಬೆಂಗಳೂರು.